ನೇಪಾಳ ಪ್ರವಾಹದಲ್ಲಿ ಕಾಣೆಯಾದ ವ್ಯಕ್ತಿಗಳ ನಿಕಟ ಸಂಬಂಧಿಗಳ DNA ಪ್ರೊಫೈಲಿಂಗ್

01 ಸೆಪ್ಟೆಂಬರ್ 2026 ದಿನಾಂಕದ ಪತ್ರಿಕಾ ಪ್ರಕಟಣೆಯ ಮೂಲಕ, ಕಠ್ಮಂಡುವಿನ ಭಾರತೀಯ ರಾಯಭಾರ ಕಚೇರಿಯು, 2026 ರ ಆಗಸ್ಟ್ 26 ರಂದು ನೇಪಾಳದಲ್ಲಿ ಹಠಾತ್ ಪ್ರವಾಹದ ಸಂತ್ರಸ್ತರ ಅವಶೇಷಗಳನ್ನು ಗುರುತಿಸುವ ಕಾರ್ಯ ವಿಧಾನಗಳಿಗೆ ಲಭ್ಯವಿರುವ ಮಾಹಿತಿಯನ್ನು ವಿವರಿಸಿದೆ. ಪತ್ರಿಕಾ ಪ್ರಕಟಣೆಯನ್ನು ಇಲ್ಲಿ ನೋಡಬಹುದು:

https://www.indembkathmandu.gov.in/media-detail/960

2. ಈ ಹಿನ್ನೆಲೆಯಲ್ಲಿ ಹಾಗೂ ಪ್ರಸ್ತುತ ನಡೆಯುತ್ತಿರುವ ಗುರುತಿಸುವಿಕೆ ಪ್ರಕ್ರಿಯೆಗೆ ಅನುಕೂಲವಾಗುವಂತೆ ಹೆಚ್ಚುವರಿ ಕ್ರಮವಾಗಿ, ನೇಪಾಳದಲ್ಲಿ ಸಂಭವಿಸಿದ ಹಠಾತ್ ಪ್ರವಾಹದ ನಂತರ ನಾಪತ್ತೆಯಾಗಿರುವ ವ್ಯಕ್ತಿಗಳ ನಿಕಟ ರಕ್ತಸಂಬಂಧಿಗಳ DNA ಪ್ರೊಫೈಲಿಂಗ್‌ಗಾಗಿ, ಭಾರತ ಸರ್ಕಾರದ ಗೃಹ ವ್ಯವಹಾರಗಳ ಸಚಿವಾಲಯವು (MHA) ದೇಶದ ಕೇಂದ್ರ ಫೋರೆನ್ಸಿಕ್ ವಿಜ್ಞಾನ ಪ್ರಯೋಗಾಲಯಗಳು (CFSL ಗಳು), ರಾಜ್ಯ ಫೋರೆನ್ಸಿಕ್ ವಿಜ್ಞಾನ ಪ್ರಯೋಗಾಲಯಗಳು (SFSL ಗಳು) ಮತ್ತು ರಾಷ್ಟ್ರೀಯ ಫೋರೆನ್ಸಿಕ್ ವಿಜ್ಞಾನ ವಿಶ್ವವಿದ್ಯಾಲಯ (NFSSU) ಪ್ರಯೋಗಾಲಯಗಳ ಸೇವೆಗಳನ್ನು ಲಭ್ಯವಾಗಿಸಲು ನಿರ್ಧರಿಸಿದೆ.

3. ಅದಕ್ಕೆ ಅನುಗುಣವಾಗಿ, ಭಾರತದಲ್ಲಿ ವಾಸಿಸುತ್ತಿರುವ ನಿಕಟ ರಕ್ತ ಸಂಬಂಧಿಗಳು, ಅಂದರೆ ತಂದೆ, ತಾಯಿ, ಮಗ, ಮಗಳು ಅಥವಾ ಸಹೋದರರು, ತಮ್ಮ ಜೈವಿಕ ಮಾದರಿಗಳನ್ನು ಸಂಗ್ರಹಿಸಬಹುದು ಮತ್ತು ಈ ಸೌಲಭ್ಯಗಳಲ್ಲಿ DNA ಪ್ರೊಫೈಲ್‌ಗಳನ್ನು ಸಿದ್ಧಪಡಿಸಬಹುದು:

(a) ಕೇಂದ್ರ ಫೋರೆನ್ಸಿಕ್ ವಿಜ್ಞಾನ ಪ್ರಯೋಗಾಲಯಗಳು (CFSLs);

(b) ರಾಜ್ಯ ಫೋರೆನ್ಸಿಕ್ ವಿಜ್ಞಾನ ಪ್ರಯೋಗಾಲಯಗಳು (SFSLs);

(c) ರಾಷ್ಟ್ರೀಯ ಫೋರೆನ್ಸಿಕ್ ವಿಜ್ಞಾನ ವಿಶ್ವವಿದ್ಯಾಲಯದ ಪ್ರಯೋಗಾಲಯಗಳು (NFSU); ಮತ್ತು

(d) DNA ಪ್ರೊಫೈಲಿಂಗ್ ಸಾಮರ್ಥ್ಯವನ್ನು ಹೊಂದಿರುವ NABL-ಅಧಿಕೃತ ಪ್ರಯೋಗಾಲಯಗಳು.

4. DNA ಪ್ರೊಫೈಲಿಂಗ್ ಸೌಲಭ್ಯಗಳನ್ನು ಹೊಂದಿರುವ ಸರ್ಕಾರಿ ಫೋರೆನ್ಸಿಕ್ ವಿಜ್ಞಾನ ಪ್ರಯೋಗಾಲಯಗಳು / ಸಂಪರ್ಕ ಕೇಂದ್ರಗಳ ಪಟ್ಟಿಯನ್ನು ಅನುಬಂಧ I ಎಂದು ಲಗತ್ತಿಸಲಾಗಿದೆ . ಅನುಬಂಧವು ಮಾದರಿಗಳ ಸಂಗ್ರಹ ಮತ್ತು DNA ಪ್ರೊಫೈಲ್‌ಗಳ

ತಯಾರಿಕೆಯನ್ನು ಸುಲಭಗೊಳಿಸಲು ಜೈವಿಕ ಮಾದರಿ ಸಂಗ್ರಹ ಫಾರ್ಮ್ ಅನ್ನು ಕೂಡ ಒಳಗೊಂಡಿದೆ.

5. ನೇಪಾಳ ಪೊಲೀಸರ ಸಲಹೆಯಂತೆ ಮತ್ತು ನೇಪಾಳದ ಅಧಿಕಾರಿಗಳು ತಿಳಿಸಿರುವ ತಾಂತ್ರಿಕ ಅವಶ್ಯಕತೆಗಳಿಗೆ ಒಳಪಟ್ಟು, ಗುರುತಿಸುವಿಕೆಗಾಗಿ ಆಟೋಸೋಮಲ್ STR DNA ಪ್ರೊಫೈಲಿಂಗ್ ಅನ್ನು ಕೈಗೊಳ್ಳಬಹುದು. ಈ ವಿಷಯದಲ್ಲಿ ಸಹಾಯವಾಣಿ ನಂಬರ್: +977 9841 6160 95.

6. DNA ಪ್ರೊಫೈಲ್‌ಗಳು ಸಿದ್ಧವಾದ ನಂತರ, ಗುರುತು ಪತ್ತೆಯಾಗದ ಮೃತದೇಹಗಳಿಂದ ಪಡೆದ DNA ಪ್ರೊಫೈಲ್‌ಗಳೊಂದಿಗೆ ಹೋಲಿಕೆ ಮಾಡಲು, ನೇಪಾಳದ ಅಧಿಕಾರಿಗಳಿಗೆ ಅಗತ್ಯವಿರುವ ಪ್ರಾಥಮಿಕ ಮಾಹಿತಿಯೊಂದಿಗೆ ಅವುಗಳನ್ನು dnacodis[at]nepalpolice[dot]gov[dot]np ವಿಳಾಸಕ್ಕೆ ಇಮೇಲ್ ಮೂಲಕ ಕಳುಹಿಸಬಹುದು. ಕಠ್ಮಂಡುವಿನಲ್ಲಿರುವ ಭಾರತೀಯ ರಾಯಭಾರ ಕಚೇರಿಯು ನೆರವು ಮತ್ತು ಸಮನ್ವಯವನ್ನು ಒದಗಿಸಲು ಅನುಕೂಲವಾಗುವಂತೆ, DNA ಪ್ರೊಫೈಲ್‌ನ ಪ್ರತಿಯನ್ನು eoikathmandufloodsupport[at]gmail[dot]com ವಿಳಾಸಕ್ಕೂ ಕಳುಹಿಸಬಹುದು

ನವದೆಹಲಿ

ಸೆಪ್ಟೆಂಬರ್ 03, 2026